# ಓದುಗರ ಸ್ಪಂದನ

## ಆದರ್ಶ ಕುಟುಂಬ

**ಕುಟುಂಬ** ವ್ಯವಸ್ಥೆ ಸಡಿಲವಾಗಲು ಕಾರಣವೇನು ಗೊತ್ತೆ? ಹಿಂದಿನದೆಲ್ಲಾ ತಪ್ಪೆಂಬ, ನಾವು ಹೊಸ ಸಂಸ್ಕೃತಿ ಕಲಿತವರೆಂಬ ಭಾವನೆಯೇ ಎಲ್ಲ ಅವ್ಯವಸ್ಥೆಗೂ ಕಾರಣ. ಹಿಂದಿನ ಅಜ್ಜ, ಅಜ್ಜಿ, ಅಪ್ಪ ಅಮ್ಮಂದಿರಂತೆ ಅನ್ನದಿಂದಲೇ ಬದುಕು ಸಾಗಿದೆ. ಸೂರ್ಯ ಪೂರ್ವದಲ್ಲಿ ಹುಟ್ಟಿ ಪಶ್ಚಿಮದಲ್ಲೇ ಮುಳುಗುತ್ತಿದ್ದಾನೆ. ಕೆಲವು ಬದಲಾವಣೆಗಳಾಗಿವೆ ನಿಜ. ಆದರೆ ಅವೆಲ್ಲವೂ ಪ್ರಗತಿಪರವಾಗಿಲ್ಲ. ಸಂಶಯ ಮನೋಭಾವ ಹೆಚ್ಚಾಗಿದೆ. ಎಂತಹ ಪ್ರತಿಕೂಲ ಸನ್ನಿವೇಶಗಳಲ್ಲೂ ಕುಟುಂಬವನ್ನು ಒಡೆಯದಂತೆ ಹಿಡಿದಿಡುವ ಶಕ್ತಿಯನ್ನು ಮಹಿಳೆ ಕಳೆದುಕೊಳ್ಳುತ್ತಿದ್ದಾಳೆ. ಹಣ ಸಂಪಾದಿಸುವ ವಿದ್ಯೆಯೊಂದಿಗೆ ಚಂಚಲತೆ, ಅಜ್ಞಾನ, ಅವಿವೇಕತನ ವಿಜೃಂಭಿಸುತ್ತಿವೆ. ಆಧುನಿಕವೆಂದು ಹೆಮ್ಮೆಪಡುವ ಈ ಬದಲಾದ ಮನೋಭಾವದ ಫಲವೇ ಅಸಂತುಷ್ಟ ಕುಟುಂಬ. ಹಿಂದಿನವರ ಜೀವನ ಪ್ರೀತಿ, ಅತಿಥಿ ಸತ್ಕಾರ, ಪರರಿಗಾಗಿ ಮರುಗುವ ಹೃದಯ, ಇದ್ದುದರಲ್ಲೇ ದಾನ ಧರ್ಮ ಮಾಡುವ ಸ್ವಭಾವ, ಇವೆಲ್ಲವೂ ಮಾಯವಾಗುತ್ತಿವೆ. ಹಿಂದಿನವರ ಮನೋಭಾವ "ಬದುಕೆಂದರೆ ಎಲ್ಲ ನಮ್ಮಿಚ್ಛೆಯಂತೆ ನಡೆಯದು. ನಮಗೆ ಅಪ್ರಿಯವಾದ ವಿಷಯಗಳಿದ್ದರೆ, ಅದನ್ನು ಬದಲಾಯಿಸಲು ಖಂಡಿತಾ ಪ್ರಯತ್ನಿಸಬೇಕು. ಆಗದಿದ್ದರೆ ಅದನ್ನು ಒಪ್ಪಿಕೊಂಡು, ನಮ್ಮ ಪೂರ್ವಾರ್ಜಿತ ಕರ್ಮಫಲ ಎಂದುಕೊಂಡು ಸುಮ್ಮನಿರಬೇಕು. ಅಂತೆಯೇ ನಮ್ಮಿಂದ ಸಾಧ್ಯವಾದಷ್ಟು ಒಳ್ಳೆಯ ಕೆಲಸಗಳೇ ಆಗುವಂತೆ ನೋಡಿಕೊಳ್ಳಬೇಕು. ಅಜ್ಞಾನದ ಕರ್ಮಫಲಗಳನ್ನು ಮುಂದಿನ ಜನ್ಮಕ್ಕಾಗಿ ಇಟ್ಟುಕೊಳ್ಳಬಾರದು" ಎಂಬುದಾಗಿತ್ತು.

ಹಿಂದಿನವರ ಕೆಲವು ಆಚಾರಗಳು ಆಧುನಿಕತೆಗೆ ಸರಿಹೋಗದಿರಬಹುದು. ಆದರೆ ಹಿಂದಿನ ಕುಟುಂಬಗಳಲ್ಲಿದ್ದ ಅನೇಕ ಆಚಾರ ಸಂಪ್ರದಾಯಗಳು ಕೌಟುಂಬಿಕ ಹಾಗೂ ಸಾಮಾಜಿಕ ಸ್ವಾಸ್ಥ್ಯವನ್ನು ಕಾಪಾಡುತ್ತಿದ್ದವು ಎಂಬುದನ್ನು ನಾವು ಮರೆಯಬಾರದು. ಅಂತಹವುಗಳನ್ನು ಆಧುನಿಕ ಸನ್ನಿವೇಶಕ್ಕೆ ಅಳವಡಿಸಿಕೊಳ್ಳುವುದರಿಂದ ನಾವು ಮಾದರಿ ಕುಟುಂಬದ ಆದರ್ಶಕ್ಕೆ ಹತ್ತಿರವಾಗಬಹುದು.

— ಕೆ.ವಿ. ಭಾರತಿ, ತಗ್ಗುಂಡಿ, ತೀರ್ಥಹಳ್ಳಿ ತಾ. ಶಿವಮೊಗ್ಗ.

"ಮನೆಯೆ ಮೊದಲ ಪಾಠಶಾಲೆ. ಜನನಿ ತಾನೆ ಮೊದಲ ಗುರುವು. ಜನನಿಯಿಂದ ಪಾಠ ಕಲಿತ ಜನರು ಧನ್ಯರು"—ಈ ಕವಿವಾಣಿ ಸಾರ್ವಕಾಲಿಕವಾದ ಸತ್ಯ. ಒಂದು ಉನ್ನತವಾದ ಸಮಾಜದ ರಚನೆಗೆ ತಾಯಿಯ ಕೊಡುಗೆ ಎಂತಹುದು ಎಂಬ ಮೌಲ್ಯವನ್ನು ಎತ್ತಿಹಿಡಿಯುತ್ತದೆ ಈ ಕವಿವಾಣಿ. ಮಕ್ಕಳನ್ನು ಕೇವಲ ಯಾಂತ್ರಿಕ ಬದುಕಿಗೆ ತಯಾರಿಸಲ್ಪಡುವ ಯಂತ್ರಗಳಂತೆ ಬೆಳೆಸದೆ, ಮುಂದೆ ಅವರು ಕುಟುಂಬದ, ಸಮಾಜದ, ರಾಷ್ಟ್ರದ ಜವಾಬ್ದಾರಿಯನ್ನು ಹೊರಬೇಕಾದ ವ್ಯಕ್ತಿಗಳಾಗಬೇಕೆಂಬ ಭಾವನೆಯಿಂದ ಅವರನ್ನು ಒಳ್ಳೆಯ ವಾತಾವರಣದಲ್ಲಿ ಉನ್ನತವಾದ ಆದರ್ಶಗಳೊಂದಿಗೆ ಬೆಳೆಸುವ ಜವಾಬ್ದಾರಿ ಕುಟುಂಬದ ಮೇಲಿದೆ.

> ಪ್ರತಿಯೊಂದು ಮನೆಯಲ್ಲಿಯೂ ಶಿಸ್ತನ್ನು ಪಾಲಿಸಿದರೆ ಶೇಕಡ ೯೫ರಷ್ಟು ಬಾಲಾಪರಾಧ (Juvenile delinquency) ಕಡಮೆಯಾಗುತ್ತದೆ.
>
> —ಜೆ.ಎಡ್ಗರ್ ಹೂವರ್ (J. Edger Hoover).

ಇಲ್ಲದಿದ್ದಲ್ಲಿ ಮುಂದೊಂದು ದಿನ ನಮ್ಮ ದೇಶ ಸಮಾಜ-ಕಂಟಕರಿಂದ, ದ್ರೋಹಿಗಳಿಂದ, ಜವಾಬ್ದಾರಿಯಿಲ್ಲದ, ರಾಷ್ಟ್ರಾಭಿಮಾನವಿಲ್ಲದ ದುಷ್ಟರು, ಹೇಡಿಗಳಿಂದ ತುಂಬಿಹೋಗುತ್ತದೆ.

ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಇಂದಿನ ಕುಟುಂಬಗಳು ಗಂಭೀರವಾಗಿ ಯೋಚಿಸಬೇಕು. ಒಂದು ಕುಟುಂಬದ ಶಾಂತಿ ಮತ್ತು ನೆಮ್ಮದಿಗಳು ಆ ಕುಟುಂಬ ಎಷ್ಟರಮಟ್ಟಿಗೆ ನೈತಿಕ ಮತ್ತು ಆಧ್ಯಾತ್ಮಿಕ ನೆಲಗಟ್ಟಿನ ಮೇಲೆ ಸುಭದ್ರವಾಗಿ ನಿಂತಿದೆ ಎಂಬುದನ್ನು ಅವಲಂಬಿಸಿವೆ. — ಶ್ರೀಮತಿ ರಮಾ ನಾಗೇಂದ್ರ, ಬೆಂಗಳೂರು.

ಇಂದು ವಿಭಕ್ತ ಕುಟುಂಬಗಳೇ ಹೆಚ್ಚಾಗಿವೆ. ಹಿಂದೆ ಅವಿಭಕ್ತ ಕುಟುಂಬಗಳಲ್ಲಿರುತ್ತಿದ್ದ ಪ್ರೀತಿ, ಸಹಕಾರ, ಸೌಹಾರ್ದ ಮನೋಭಾವನೆಗಳು ಮರೆಯಾಗಿ ಪ್ರತಿಯೊಬ್ಬರಲ್ಲೂ ಸ್ವಾರ್ಥ, ಈರ್ಷ್ಯೆ ಒಣಪ್ರತಿಷ್ಠೆ ಮತ್ತು ಪೈಪೋಟಿಯ ಮನೋಭಾವನೆಗಳು ಬೆಳೆದು ಕುಟುಂಬದ ಶಾಂತಿ ಸಾಮರಸ್ಯಗಳು ಕುಸಿಯುತ್ತಿವೆ.

ಸಣ್ಣ ಪುಟ್ಟ ಕಾರಣಗಳನ್ನೇ ದೊಡ್ಡದು ಮಾಡಿ ವಿವಾಹ ವಿಚ್ಛೇದನ ನಡೆಸುವುದು, ವರದಕ್ಷಿಣೆಗಾಗಿ ಹೆಣ್ಣನ್ನು ಶೋಷಿಸುವುದು, ಒಣಪ್ರತಿಷ್ಠೆಯ ಆಡಂಬರದ ವಸ್ತುಗಳಿಗಾಗಿ ಲಂಚಕ್ಕೆ ಕೈಯೊಡ್ಡುವುದು, ಇಲ್ಲವೆ ಕುಡಿತ ಜೂಜುಗಳ ದಾಸರಾಗಿ ಕುಟುಂಬ ಮತ್ತು ಸಮಾಜಕ್ಕೆ ಹೊರೆಯಾಗುವುದು ಗಂಡಸರಲ್ಲಿ ಹೆಚ್ಚುತ್ತಿದೆ.

**ಪ್ರಜೆಗಳೇ, ಸಂಪತ್ತನ್ನು ಗಳಿಸಲು ನೀವು ಸರ್ವಪ್ರಯತ್ನವನ್ನೂ ಮಾಡುತ್ತೀರಿ. ಆದರೆ ಯಾರಿಗಾಗಿ ನೀವು ಆ ಸಂಪತ್ತನ್ನು ಬಿಟ್ಟುಹೋಗುತ್ತೀರೊ ಆ ಮಕ್ಕಳ ಕಡೆ ನಿಮಗೆ ಗಮನವೇ ಇಲ್ಲವಲ್ಲ! —ಸಾಕ್ರಟೀಸ್.**

ಹೆಂಗಸರು ಹೊರಗೆ ದುಡಿದು ಹಣಗಳಿಸಿ ದೊಡ್ಡ ಮನೆ, ಕಾರು ಅತ್ಯಾಧುನಿಕ ಪೀಠೋಪಕರಣಗಳು ಇವನ್ನೆಲ್ಲಾ ಗಳಿಸಿದರೆ ನಾವು ಸಮಾಜದಲ್ಲಿ ಪ್ರತಿಷ್ಠಿತ ಮತ್ತು ಆದರ್ಶ ವ್ಯಕ್ತಿಗಳೆನಿಸುತ್ತೇವೆಂದು ಭಾವಿಸುತ್ತಾರೆ. ಪ್ರೀತಿಯ ಪಾಲನೆಯನ್ನು ಕಾಣಬೇಕಾದ ಮಕ್ಕಳನ್ನು ಪ್ಲೇ ಹೋಂಗಳಿಗೆ, ಬೇಬಿ ಕೇರ್ ಸೆಂಟರ್‌ಗಳಿಗೆ ಕಳುಹಿಸುತ್ತಾರೆ ಮತ್ತು ಗೌರವಾದರಗಳಿಂದ ಕಾಣಬೇಕಾದ ಮನೆಯ ಹಿರಿಯರನ್ನು ವೃದ್ಧಾಶ್ರಮಗಳಿಗೆ ಸಾಗಹಾಕುತ್ತಾರೆ. ಹಣ ಸಂಪಾದನೆಯೇ ಜೀವನದ ಏಕೈಕ ಗುರಿ ಎಂದು ತಿಳಿದು, ಮಕ್ಕಳಿಗೆ ಪ್ರೀತಿ ಮತ್ತು ಮಾರ್ಗ ದರ್ಶನಕ್ಕೆ ಬದಲಾಗಿ ಅವರು ಕೇಳಿದಾಗಲೆಲ್ಲ ಹಣ ನೀಡಿ ಅವರು ದುಶ್ಚಟಗಳಿಗೆ ದಾಸರಾಗುವಂತೆ ಮಾಡುತ್ತಿದ್ದಾರೆ. ಇದರಿಂದ ಮಕ್ಕಳು ಸಮಾಜಘಾತುಕರಾಗಿ ಬೆಳೆಯುತ್ತಾರೆ.

ಆದರೆ ಒಂದು ಕುಟುಂಬದಲ್ಲಿ ಗಂಡ, ಹೆಂಡತಿ, ಮಕ್ಕಳು ಮನೆಯ ಹಿರಿಯರು ಎಲ್ಲರೂ ಪರಸ್ಪರ ಪ್ರೀತಿಯಿಂದ ಒಬ್ಬರನ್ನು ಒಬ್ಬರು ಅರಿತು ನಡೆದರೆ ಕುಟುಂಬದಲ್ಲಿ ಶಾಂತಿ ಮತ್ತು ಸಾಮರಸ್ಯ ನೆಮ್ಮದಿಗಳು ಇರುತ್ತವೆ. ಗಂಡಸು ತಾನು ನ್ಯಾಯವಾಗಿ ಸಂಪಾದಿಸಿದ ಹಣದಿಂದ ತನ್ನ ಕುಟುಂಬದ ಸದಸ್ಯರ ಬೇಡಿಕೆಗಳನ್ನು ಪೂರೈಸಿ, ಅವರೊಡನೆ ಪ್ರೀತಿ, ವಿಶ್ವಾಸಗಳಿಂದ ಇರಬೇಕು.

ಹೆಣ್ಣು ಸಂಸಾರದ ಕಣ್ಣು ಎನ್ನುತ್ತಾರೆ. ಅವಳು ಮೊದಲು ತನ್ನ ಕುಟುಂಬದ ಸದಸ್ಯರಿಗೆ ಅವರ ಸಮಯಕ್ಕೆ ಸರಿಯಾಗಿ ಅವರ ಅಗತ್ಯ ಗಳನ್ನು ಅರಿತು ಸಹನೆ ಮತ್ತು ಸೌಜನ್ಯಗಳಿಂದ ಎಲ್ಲರೊಂದಿಗೂ ಆತ್ಮೀಯವಾಗಿ ನಡೆಯುತ್ತಾ ಅವರ ಅಗತ್ಯಗಳನ್ನು ಪೂರೈಸುವುದು ಅವಳ ಮೊದಲ ಕರ್ತವ್ಯ. —ಗೀತಾ ಕೆ. ಮೂರ್ತಿ.

**ಆದರ್ಶ** ಕುಟುಂಬ ಹೇಗಿರಬೇಕು? ಸಾಕಷ್ಟು ಗಾಳಿ, ಬೆಳಕಿನಿಂದ ಕೂಡಿದ, ಸದೃಢವಾಗಿ ಕಟ್ಟಲ್ಪಟ್ಟ, ವಿಶಾಲವಾದ ಮನೆಯಲ್ಲಿ ಮೂರು ಪೀಳಿಗೆಯವರು ವಾಸಿಸುತ್ತಿರಬೇಕು. ಅತಿ ಹೆಚ್ಚು ಆಧುನಿಕ ಪೀಠೋಪಕರಣಗಳಿರದೆ, ವಯೋವೃದ್ಧರೂ ಮಕ್ಕಳೂ ಓಡಾಡಲು ತೊಂದರೆಯಾಗದಂತಿರಬೇಕು.

ಎಲ್ಲಕ್ಕಿಂತ ಹೆಚ್ಚಾಗಿ ಹಿರಿಯ ಪೀಳಿಗೆಯ ಬಗ್ಗೆ ಪ್ರೀತಿ ಗೌರವಗಳಿರಬೇಕು. ಮಕ್ಕಳು, ಮೊಮ್ಮಕ್ಕಳು ಹಿರಿಯರ ಕುಶಲವನ್ನು ವಿಚಾರಿಸಿ ಆತ್ಮೀಯವಾಗಿ ಹತ್ತು ನಿಮಿಷಗಳಾದರೂ ಮಾತಾಡಬೇಕು. ಆಸ್ತಿಗೆ ಅಥವಾ ಯಾವುದೇ ಮುಖ್ಯ ವಿಷಯದ ಬಗ್ಗೆ ನಿರ್ಣಯ ತೆಗೆದುಕೊಳ್ಳುವ ಮೊದಲು, ವೃದ್ಧರಾದ ತಾಯಿ, ತಂದೆಯರ, ಸಲಹೆ, ಬುದ್ಧಿವಾದವನ್ನು ಕೇಳಲೇಬೇಕು. ಏಕೆಂದರೆ ವೃದ್ಧರ ಅನುಭವ ಅತ್ಯಂತ ಬೆಲೆ ಬಾಳುವಂತಹುದು. ಹೀಗೆ ಮಾಡುವುದರಿಂದ ಅವರಿಗೆ ಪ್ರಾಮುಖ್ಯ ನೀಡಿದಂತಾಗಿ ಅವರ ಮನಸ್ಸಿಗೆ ಎಷ್ಟೋ ಸಮಾಧಾನ ವನ್ನು ನೀಡುತ್ತದೆ.

ತಿಳಿಹಾಸ್ಯ ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ. ಸರಳ, ಪ್ರಾಮಾಣಿಕ ಜೀವನವನ್ನು ನಡೆಸುತ್ತಾ, ಪರಸ್ಪರ ನಂಬಿಕೆ, ಪ್ರೀತಿ, ಗೌರವಗಳಿಂದ ಕೂಡಿದ ಸದಸ್ಯರಿದ್ದರೆ, ಆ ಮನೆ ಸಂತೋಷದಿಂದ ಕೂಡಿರುತ್ತದೆ. ಬಹಳ ಮುಖ್ಯವಾದ ವಿಷಯ, ಧಾರ್ಮಿಕ ಪ್ರವೃತ್ತಿ ಮತ್ತು ದೈವಭಕ್ತಿ ಇರುವ ಕುಟುಂಬದಲ್ಲಿ ಶಾಂತಿ ನೆಲೆಸಿರುತ್ತದೆ. ಮತ್ತು ಕಷ್ಟಗಳನ್ನು ಎದುರಿಸುವ ಶಕ್ತಿ ಬರುತ್ತದೆ. ಮಲಗುವ ಮೊದಲು ಕುಟುಂಬದ ಎಲ್ಲ ಸದಸ್ಯರೂ ಯಾವುದಾದರೂ ಸದ್ಗ್ರಂಥ ವನ್ನು ಓದಿ ವಿಚಾರ ವಿನಿಮಯ ಮಾಡಿಕೊಳ್ಳುವುದು ಅತ್ಯಂತ ಆವಶ್ಯಕ. —ಅನಾಮಿಕ

**ಈಗಿನ** ಗಣಕೀಕೃತ-ಸಮಾಜದ ಸ್ಥಿತಿಮಾನವನ್ನು ಅನು ಲಕ್ಷಿಸಿದರೆ, ನಾವು ಅವಿಭಕ್ತ ಕುಟುಂಬ ವ್ಯವಸ್ಥೆಯ ಬಗ್ಗೆ ಕನಸು ಗಳನ್ನು ಹೆಣೆಯದೆಯೇ, ಆದರ್ಶಗಳನ್ನೆಲ್ಲಾ ವಿಭಕ್ತ ಕುಟುಂಬ ವ್ಯವಸ್ಥೆಯಲ್ಲಿಯೇ ಆಚರಣೆಗೆ ತರುವುದೇ ವಿಹಿತ ಎಂದು ಎನಿಸದಿರದು!

ಪ್ರೀತಿ, ವಾತ್ಸಲ್ಯ, ಮಮತೆ, ಸ್ನೇಹ, ತ್ಯಾಗ ಮೊದಲಾದ ಮಾನವಸಹಜ ಮೌಲ್ಯಗಳ ಸಾಕಾರಸ್ವರೂಪವು ದೊಡ್ಡ ಕುಟುಂಬ ಗಳಲ್ಲಿ ಕಾಣಸಿಗುವಂತೆ ಚಿಕ್ಕ ಕುಟುಂಬಗಳಲ್ಲಿಯೂ ಕೂಡ ಕಾಣ ಸಿಗುತ್ತದೆ. ಇದೇ ರೀತಿ ಇವುಗಳ ಕೊರತೆಯೂ ಸಹ ಈ ಎರಡೂ ಬಗೆಯ ಕುಟುಂಬ ವ್ಯವಸ್ಥೆಯಲ್ಲಿಯೂ ಕಂಡುಬರುವುದನ್ನು ಅವ ಗಣಿಸಲಾಗದು. ಒಟ್ಟುಕುಟುಂಬದಲ್ಲಿ ಒಗ್ಗಟ್ಟಿನ ಅಭಾವದಿಂದ ತೊಳಲಾಡುವ ಬದಲು ಪ್ರತ್ಯೇಕ ಕುಟುಂಬದಲ್ಲಿ ಸುಸಾಮರಸ್ಯ ದಿಂದಿರುವುದೇ ಮೇಲು.

ಕುಟುಂಬ ಎಂತಹದೇ ಇರಲಿ, ಅಲ್ಲಿ ಎಲ್ಲವೂ ಒಂದು ಹದ ದಲ್ಲಿರುವುದು ಮುಖ್ಯ. ಅತಿಯಾದ ಮುದ್ದು ಎಷ್ಟು ಅಪಾಯ ಕಾರಿಯೋ ಅದರಷ್ಟೇ ಏಕೆ, ಕೆಲವೊಮ್ಮೆ ಅದಕ್ಕಿಂತಲೂ ಹೆಚ್ಚು ಅಪಾಯಕಾರಿಯಾದದ್ದು ಅತಿಯಾದ ಕಠೋರತೆ ಎಂಬುದನ್ನು ನಾವು ತಿಳಿಯಬೇಕು. ಹಿರಿಯರ ನಡೆ ನುಡಿ ಕಿರಿಯರಿಗೆ ಮೇಲ್ಪಂಕ್ತಿ ಯಾಗುತ್ತದೆ. ಕಿರಿಯರು ಸನ್ಮಾರ್ಗದಲ್ಲಿರಬೇಕೆಂದು ಬರೀ ಬಯಸಿ ದರೆ ಸಾಲದು. ಸನ್ಮಾರ್ಗದಲ್ಲಿರುವ ಹಿರಿಯ ಸದಸ್ಯರ ಹೃದಯ ವೈಶಾಲ್ಯ ಮೊದಲಾದ "ಆದರ್ಶ ಕುಟುಂಬದ ಮೌಲ್ಯಗಳು" ಹಂತಾನುಹಂತವಾಗಿ ಕಿರಿಯರಿಂದ ಗ್ರಹಿಸಲ್ಪಟ್ಟು, ನಿಧಾನವಾಗಿ ಯಾದರೂ ಪರಿವರ್ತನೆಯಾಗುತ್ತದೆ. ಆಗ "ವಸುಧೈವ ಕುಟುಂಬ ಕಮ್" "ಸರ್ವೇ ಜನಾಃ ಸುಖಿನೋ ಭವಂತು" ಎಂಬ ಸದಾಶಯ ಗಳೂ ನಿಜವಾಗುತ್ತವೆ. **—ಮಹೇಶ್ ಕುಮಾರ್, ಹುಬ್ಬಳ್ಳಿ.**

**ಈಗಿನ** ಕುಟುಂಬ ವ್ಯವಸ್ಥೆ ಸಡಿಲಗೊಳ್ಳುತ್ತಿದೆ ಎಂದು ಬಹಳ ಜನರು ಆರೋಪಿಸಬಹುದು. ಆದರೆ ಭಾರತದ ಮಟ್ಟಿಗೆ ಅದು ಅಷ್ಟು ನಿಜವಲ್ಲ. ನಮ್ಮಲ್ಲಿ ಪ್ರಚಲಿತವಿದ್ದ ಅವಿಭಕ್ತ ಕುಟುಂಬ ವ್ಯವಸ್ಥೆ ಖಂಡಿತಾ ಅವಸಾನಗೊಳ್ಳುತ್ತಿದೆ. ಅನೇಕ ಕಾರಣಗಳಿಂದ ಸಣ್ಣ ಕುಟುಂಬಗಳೇ ಪ್ರಚಲಿತವಾಗಿವೆ. ಅವಿಭಕ್ತ ಕುಟುಂಬದಲ್ಲಿ ಮಗು ಎಲ್ಲವನ್ನೂ ಕುಟುಂಬದ ಇತರ ಸದಸ್ಯರೊಡನೆ ಹಂಚಿ ಕೊಂಡು ಸಹಜೀವನದ ಪಾಠ ಕಲಿಯುತ್ತದೆ. ಆದರೆ ತಂದೆ, ತಾಯಿ ಗಳಿಂದ ಹೆಚ್ಚಿನ ಗಮನ ನಿರೀಕ್ಷಿಸುವ ಹಾಗಿಲ್ಲ. ಹಿಂದೆ ತಂದೆ

ತಾಯಿಗಳಿಗೆ ತಮ್ಮ ಮಕ್ಕಳು ಏನು ಕಲಿಯುತ್ತಾರೆ, ಹೇಗೆ ಮುಂದುವರಿಯುತ್ತಿದ್ದಾರೆ ಎಂಬುದರ ಬಗ್ಗೆ ಹೆಚ್ಚಿನ ಆಸಕ್ತಿ ಇರಲಿಲ್ಲ. ಎಲ್ಲರಂತೆ ತಮ್ಮ ಮಕ್ಕಳೂ ಇದ್ದರೆ ಸರಿ ಎಂಬ ಭಾವನೆ.

ಆದರೆ ಈಗಿನ ಸಣ್ಣ ಕುಟುಂಬಗಳಲ್ಲಿ ಹಾಗಿಲ್ಲ. ತಂದೆ ತಾಯಿಗಳು ಮಕ್ಕಳ ಬೆಳವಣಿಗೆಯ ಬಗ್ಗೆ ವಿಶೇಷ ಕಾಳಜಿ ವಹಿಸುತ್ತಾರೆ. ಅವರಿಗೆ ಬೇಕಾದಂತಹ ಆಹಾರ, ವಿದ್ಯಾಭ್ಯಾಸ, ಆರೋಗ್ಯ, ನಡವಳಿಕೆಗಳ ಬಗ್ಗೆ ಹೆಚ್ಚಿನ ಗಮನ ಕೊಟ್ಟು ಅನೇಕ ರೀತಿಯ ತ್ಯಾಗಗಳಿಗೆ ತಯಾರಾಗಿರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಆದರ್ಶ ಕುಟುಂಬದ ಕುರುಹುಗಳು ಸ್ಪಷ್ಟವಾಗಿ ಗೋಚರಿಸುತ್ತವೆ. ಪರಸ್ಪರರಲ್ಲಿ ಪ್ರೀತಿ, ಸೌಹಾರ್ದ ಭಾವನೆ, ಬಿಚ್ಚುಮನಸ್ಸಿನ ಮಾತುಕತೆ, ನಂಬಿಕೆ, ಗೌರವಗಳು ಯಥೇಚ್ಛವಾಗಿರಬೇಕು. ಮಗು ಗಂಡಾಗಲಿ, ಹೆಣ್ಣಾಗಲಿ ಬೇಧವಿಲ್ಲದ ಅಂತಃಕರಣ ತಂದೆ ತಾಯಿಗಳಲ್ಲಿ ಇರಬೇಕು. ರೂಪ ಮತ್ತು ಬುದ್ಧಿಮತ್ತೆಗಳ ಅಂತರವನ್ನು ಗಮನಿಸದೆ ಅವರ ಪ್ರೀತಿ ಸಮಾನವಾಗಿರಬೇಕು. ಎಂತಹ ಪರಿಸ್ಥಿತಿ ಬಂದರೂ ಅದಕ್ಕೆ ಹೊಂದಿಕೊಂಡು ಹೋಗುವಂತಹ ಮತ್ತು ಅದನ್ನು ಸಕಾರಾತ್ಮಕವಾಗಿ ಸ್ವೀಕರಿಸುವ ಮನೋಭಾವವನ್ನು ಹೊಂದಿರಬೇಕು. ಜೀವನವೆಂಬುದೇ ಸುಖದುಃಖಗಳ ಮಿಶ್ರಣ ಎಂಬುದನ್ನು ಮರೆಯಬಾರದು.

**—ಗೀತಾ ರವಿಕುಮಾರ್, ಮೈಸೂರು**

ಧರ್ಮ, ಅರ್ಥ, ಕಾಮ, ಮೋಕ್ಷ ಇವು ಜೀವನದಲ್ಲಿ ಮಾನವ ಗಳಿಸಬೇಕಾದ ಪುರುಷಾರ್ಥಗಳೆಂದು ಪರಿಗಣಿಸಿದ ನಮ್ಮ ಪೂರ್ವಿಕರು ಮನುಷ್ಯಜೀವನದ ಎಲ್ಲ ಅಂಶಗಳಿಗೂ ಮಹತ್ವ ಕೊಟ್ಟಿದ್ದರು. ಪತಿಯು ಧರ್ಮಪತ್ನಿಯ ಕೈಹಿಡಿದುಕೊಂಡು ಧರ್ಮ, ಅರ್ಥ, ಕಾಮಗಳನ್ನು ಪೂರೈಸಿಕೊಳ್ಳುವಾಗ ಪತ್ನಿಯನ್ನು ಮೀರುವುದಿಲ್ಲ ಎಂದು ಪ್ರತಿಜ್ಞೆ ಮಾಡುತ್ತಾನೆ. ಹೀಗೆ ಜೀವನದ ಹೆಜ್ಜೆಗಳನ್ನು ಇಡುವಾಗ ಧರ್ಮಮಾರ್ಗದಲ್ಲಿ ಅರ್ಥಗಳಿಸಿ, ಕಾಮ ಪೂರೈಸಿಕೊಂಡರೆ ಪತಿಪತ್ನಿಯರು ಇಹದಲ್ಲೂ ಉತ್ತಮ ಬಾಳ್ವೆ ಮಾಡಬಹುದು! ಇಲ್ಲಿ ಸಲ್ಲುವವರು ಅಲ್ಲಿಯೂ ಸಲ್ಲುವರಯ್ಯಾ!

ಕುಟುಂಬ ಎಂಬುದು ಎರಡು ಜೀವಗಳ ಸಂಬಂಧದಿಂದ ಪ್ರಾರಂಭವಾಗುತ್ತದೆ. ಇಬ್ಬರಲ್ಲೂ ಅಭಿರುಚಿ, ಮನೋಧರ್ಮ, ಹವ್ಯಾಸ ಭಿನ್ನವಾದರೆ ಘರ್ಷಣೆ ಆರಂಭವಾಗುತ್ತದೆ. ಆದ್ದರಿಂದ ಪರಸ್ಪರರು, ತಮ್ಮಲ್ಲಿರುವ ವಿಭಿನ್ನ ಮನೋಭಾವವನ್ನು ವಿಚಾರ "ಮಂಥನ"ದಿಂದ ತಮ್ಮಲ್ಲೇ ಸರಿಪಡಿಸಿಕೊಳ್ಳಬೇಕು. ಪರಸ್ಪರ ಒಬ್ಬರಿಗೊಬ್ಬರು ಕೂಡಿ ಬಾಳುವ ಧ್ಯೇಯ ಇಟ್ಟುಕೊಂಡು ಬಾಳಬೇಕು. ಸ್ವಾರ್ಥದೃಷ್ಟಿಕೋನ ಕಡಿಮೆಯಾದಾಗ ಪರಸ್ಪರರಲ್ಲಿ ಸಾಮರಸ್ಯ ಬೆಳೆಯುತ್ತದೆ. ಇದಕ್ಕಾಗಿ ಕುಟುಂಬದ ಸದಸ್ಯರು ತಮ್ಮ ದಿನಚರಿಯಲ್ಲಿ ಕೆಲವು ನಿಯಮಗಳನ್ನು ಪಾಲಿಸಬೇಕು.

ಪ್ರಾತಃಕಾಲ ೫ರಿಂದ ೬ ಗಂಟೆಯ ಒಳಗೆ ಎದ್ದು ನಿತ್ಯಶೌಚಾದಿ ಕಾರ್ಯಗಳನ್ನು ಮುಗಿಸಿದನಂತರ ಕನಿಷ್ಠಪಕ್ಷ ೧೦ ನಿಮಿಷ ದೇವರ ಬಗ್ಗೆ ಚಿಂತಿಸುವ, ಪ್ರಾರ್ಥನೆ ಮಾಡುವ ಪರಿಪಾಠ ರೂಢಿಸಿ ಕೊಳ್ಳಬೇಕು. ಅನಂತರ ದಿನದ ಬೇರೆ ಕೆಲಸ ಕಾರ್ಯಗಳಲ್ಲಿ ತೊಡಗಬೇಕು. ಇದರಿಂದ ಮನಸ್ಸಿನ ಸಾಮರ್ಥ್ಯ ಬೆಳೆಯುತ್ತದೆ.

ದಿನದ ತಿಂಡಿ ಎರಡು ಊಟಗಳಲ್ಲಿ ಒಮ್ಮೆಯಾದರೂ ಕುಟುಂಬದ ಸದಸ್ಯರು ಒಟ್ಟಿಗೆ ತೆಗೆದುಕೊಳ್ಳುವ ರೂಢಿ ಪಾಲಿಸಬೇಕು. ಅನಂತರ ಕುಟುಂಬದ ಸದಸ್ಯರು ಅಂದಿನ ದಿನದ ಕಾರ್ಯಕ್ರಮಗಳ ಬಗ್ಗೆ ಪರಸ್ಪರ ವಿನಿಮಯ ಮಾಡಿಕೊಳ್ಳಬೇಕು. ಆಗ ಕಿರಿಯರಿಗೆ ಬಂದ ಸಮಸ್ಯೆಗಳನ್ನು ಪರಿಹಾರ ಮಾಡಬೇಕು. ಹಿರಿಯರು ನಡೆಯುವ ರೀತಿ ನೀತಿ ಆದರ್ಶಗಳನ್ನು ಕಿರಿಯರು ಕಲಿಯುವ ಪ್ರೇರಣೆ ಆಗ ಬೇಕು. ಅಂದು ಎದುರಾದ ಸಮಸ್ಯೆಗಳು ಮತ್ತು ಅವುಗಳ ನಿವಾರಣೆಯ ವಿಷಯದಲ್ಲಿ ಹಿರಿಯರು ತಾವು ನಡೆದುಕೊಂಡ ಬಗ್ಗೆ ವಿವರಿಸಿ ದಾಗ ಕಿರಿಯರಿಗೆ ಮಾರ್ಗದರ್ಶನ ದೊರಕುವಂತಾಗುತ್ತದೆ.

ಕುಟುಂಬದ ಸದಸ್ಯರು ಹೀಗೆ ಜೊತೆಗೂಡಿ ದಿನಚರಿ ನಡೆಸುವುದರ ಜೊತೆಗೆ ಹಬ್ಬಹರಿದಿನಗಳಲ್ಲಿ, ವಿಶೇಷ ಸಮಾರಂಭಗಳಲ್ಲಿ ಅಕ್ಕಪಕ್ಕದವರು, ಬಂಧುಬಾಂಧವರ ಜೊತೆಗೆ ಕಲೆಯುವುದು ತುಂಬ ಹಿತಕರವಾದ ಮನೋಭಾವನೆಗಳನ್ನು ಉಂಟುಮಾಡುವುದು. ಇದರಿಂದ ಮಾನವೀಯ ಭಾವನೆಗಳಾದ ಪ್ರೀತಿ, ವಿಶ್ವಾಸ, ಆತ್ಮೀಯತೆ ಬೆಳೆದು ಇಂದಿನ ತಾಂತ್ರಿಕ ಯುಗದಲ್ಲಿ ದುಡಿಯುವ ಯಂತ್ರವಾಗಿರುವ ಮನುಜನಿಗೆ ಮಾನವನಾಗಲು ಅವಕಾಶವಾಗುತ್ತದೆ. ಹೀಗೆ ಪ್ರತಿ ಕುಟುಂಬ ಆದರ್ಶದ ಮೆಟ್ಟಲುಗಳನ್ನು ಏರಿದರೆ "ಹನಿ ಹನಿ ಕೂಡಿದರೆ ಹಳ್ಳ, ತೆನೆತೆನೆ ಕೂಡಿದರೆ ಬಳ್ಳ" ಎಂಬ ನಾಡ ನುಡಿಯಂತೆ ಉತ್ತಮ ಸಮಾಜದ ನಿರ್ಮಾಣ, ತನ್ಮೂಲಕ ಇಂಥ ಆದರ್ಶ ಕುಟುಂಬಗಳಿಂದ ರಾಷ್ಟ್ರದ ಉತ್ಥಾನ ಸಾಧ್ಯ. **—ಬೇ.ನ. ಶ್ರೀ. ಮೂರ್ತಿ, ತುಮಕೂರು.**

ನಿನ್ನ ಸುಖ, ಮುಖವಾಡ ಕಿತ್ತೆಸೆದ ನಿನ್ನ ದುಃಖವೇ. ಯಾವ ಬಾವಿಯಿಂದ ನಗೆ ಬುಗ್ಗೆಯುಕ್ಕುತ್ತಿದೆಯೊ ಅದೇ ಬಾವಿ ಅನೇಕ ಸಲ ನಿನ್ನ ಕಂಬನಿಗಳಿಂದ ತುಂಬಿತ್ತು.... ನಿನ್ನ ಚೇತನದಾಳವನ್ನು ದುಃಖ ಕೊರೆ ಕೊರೆದಷ್ಟೂ ಸುಖವನ್ನು ಅದು ತುಂಬಿಕೊಳ್ಳಬಲ್ಲದು.

**—ಖಲೀಲ್ ಗಿಬ್ರಾನ್**